**ದಿನಾಂಕ: 24-02-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಬಿ. ವಕೀಲರಿಂದ**

1. ನಾನು ಜೇವರ್ಗಿಯ ಡಿಗ್ರಿ ಕಾಲೇಜಿನಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮೂಲ ಊರು ಗುಂಡಗುರ್ತಿ ಇರುತ್ತದೆ. ಬದನಿಹಾಳ ಗ್ರಾಮದಲ್ಲಿ ನಿಮಗೆ ಸಂಬಂಧಪಟ್ಟಂತೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ನಮ್ಮ ಊರಿನಿಂದ ಬನಿಹಾಳ ಗ್ರಾಮ 100 ಕಿ.ಮೀ. ದೂರ ಆಗುತ್ತದೆ. ನಿಮ್ಮ ಊರಿನಲ್ಲಿಯೂ ಸಹ ಹೊಲಗಳು ಮಾರಾಟಕ್ಕೆ ಇವೆ ಎಂದರೆ ಸರಿ. ವಾದಿ ನನ್ನ ಸಂಬಂಧಿ ಆಗಬೇಕು. ವಿನೋದನಾಯಕ ನಿಮ್ಮ ಸಹೋದರನಾಗಬೇಕು ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಗೆಸ್ಟ್ ಲೆಕ್ಚರರ್ ಆಗುವ ಮುಂಚಿತವಾಗಿ ನೀವು ಮತ್ತು ಬಾಬು ಎನ್ನುವವರು ಕೋಳಿ ಫಾರಂ ನಡೆಸುತ್ತಿದ್ದೀರಿ ಎಂದರೆ ಸರಿ. ಕೋರೋನಾ ಸಂದರ್ಭದಲ್ಲಿ ನೀವು ಮಾಡುತ್ತಿದ್ದಂತಹ ವ್ಯಾಪಾರ ನಷ್ಟ ಆಯಿತು ಎಂದರೆ ಬಿಜಿನಸ್ ಇತ್ತು ಕೋಳಿ ಫಾರಂನ್ನು ಮಾರಾಟ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

2. ಬಾಬು ಎನ್ನುವವರು ನನಗೆ ಸುಮಾರು 15 ವರ್ಷಗಳಿಂದ ಪರಿಚಯ. ಬಾಬು ಮತ್ತು ನೀವು ಸ್ನೇಹಿತರಿದ್ದೀರಿ ಹಾಗೂ 15 ವರ್ಷಗಳಿಂದ ವ್ಯಾಪಾರ ಮಾಡುತ್ತಾ ಪರಿಚಯಸ್ಥರು ಎಂದರೆ ಸ್ನೇಹಿತರು ಒಂದು ವ್ಯವಹಾರ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಬಾಬುರವರ ತಾಯಿ ಹೆಸರು ಪುತಳಾಬಾಯಿ ಎಂದರೆ ಸರಿ. ಪ್ರತಿವಾದಿ ಪುತಳಾಬಾಯಿರವರ ಅಣ್ಣ ಎಂದರೆ ಸರಿ. ಬಾಬು ಬೆಂಗಳೂರಿನಲ್ಲಿ ಇರುತ್ತಾರೆ. ನಾನು ಮತ್ತು ಬಾಬುರವರು 4 ವರ್ಷಗಳಿಂದ ಇಲ್ಲಿಯವರೆಗೆ ಭೇಟಿ ಆಗಿಲ್ಲ. ಈ ಕೇಸು ಹಾಕಿದ ದಿನಾಂಕದಿಂದ ಬಾಬು ನಿಮಗೆ ಸಿಕ್ಕಿಲ್ಲ ಎಂದರೆ ಕಾಂಟ್ಯಾಕ್ಟಿನಲ್ಲಿ ಇದ್ದಾರೆ ಎಂದು ಉತ್ತರಿಸುತ್ತಾರೆ.

3. ಪ್ರತಿವಾದಿಗೆ ದಾವಾದ ಜಮೀನನ್ನು ಹೊರತುಪಡಿಸಿ ಬೇರೆ ಜಮೀನು ಇಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಪರಿಚಯ ಇರುತ್ತಾರೆ. ದಾವಾದ ಜಮೀನನ್ನು ನಾನು ನೋಡಿರುತ್ತೇನೆ. ದಾವಾದ ಜಮೀನನ್ನು ಯಾವಾಗ ನೋಡಿದ್ದೀರಿ ಎಂದರೆ ನಾನು, ಬಾಬು ಮತ್ತು ಸ್ನೇಹಿತರು ಊರಿಗೆ ಹೋದಾಗ ಆ ಜಮೀನನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬಾಬುರವರು ಮಧ್ಯಸ್ಥಿಕೆ ವಹಿಸಿಲ್ಲ. ಬಾಬುರವರು ಪ್ರತಿವಾದಿಗೆ ಸಂಬಂಧಿಕರಾಗಿದ್ದರಿಂದ ಹಾಗೂ ನಿಮ್ಮ ಸ್ನೇಹಿತರಾಗಿದ್ದರಿಂದ ದಾವಾ ವ್ಯವಹಾರಕ್ಕೆ ಸಂಬಂಧಪಟ್ಟಂತೆ ವ್ಯವಹಾರದ ಮಧ್ಯಸ್ಥಿಕೆ ವಹಿಸಬೇಕೆಂದು ಹಾಗೂ ಅವರ ಸಹಿ ಪಡೆಯಬೇಕು ಎಂದು ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಜಮೀನು 2 ಬಾರಿ ನೋಡಿರುತ್ತೇನೆ. ದಾವಾದ ಜಮೀನನ್ನು ಯಾವ ತಿಂಗಳು ಯಾವ ವರ್ಷ ನೋಡಿದ್ದೇನೆಂದು ನಿಖರವಾಗಿ ಹೇಳಲು ಬರುವುದಿಲ್ಲ. ದಾವಾದ ಜಮೀನನ್ನು ನಾನು ಮತ್ತು ಬಾಬು ಮಾತ್ರ ನೋಡಿರುತ್ತೇನೆ. ದಾವಾದ ಜಮೀನು ಸಾದಾ ಜಮೀನು ಇರುತ್ತದೆ ಈಗ ದಾವಾದ ಜಮೀನು ಯಾವ ರೀತಿ ಇದೆ ಎಂದು ಗೊತ್ತಿಲ್ಲ. ದಾವಾದ ಜಮೀನನ್ನು ಪ್ರತಿವಾದಿಯು ತಾನು ಸಾಗುವಳಿ ಮಾಡುತ್ತಿದ್ದಾರೋ ಅಥವಾ ಬೇರೆಯವರಿಗೆ ಪಾಲಿಗೆ ಹಾಕಿದ್ದಾರೋ ಎಂದರೆ ಗೊತ್ತಿಲ್ಲ. ದಾವಾದ ಜಮೀನಿನ ಆದಾಯದಿಂದ ಪ್ರತಿವಾದಿಯ ಕುಟುಂಬ ನಡೆಯುತ್ತದೆ ಎಂದರೆ ಗೊತ್ತಿಲ್ಲ.

4. ಖರೀದಿ ಕರಾರು ಪತ್ರಕ್ಕೆ ಸಹಿ ಮಾಡುವ ಮುಂಚೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಭೇಟಿ ಆಗಿಲ್ಲ. ವ್ಯವಹಾರದ ಮಾತುಕತೆಯ ಸಮಯದಲ್ಲಿ ನಾನು ಇದ್ದೆನು. ಎಲ್ಲಿ ಮತ್ತು ಯಾವಾಗ ಮಾತುಕತೆ ಆಯಿತು ಎಂದರೆ ದಿನಾಂಕ 17-07-2019ಕ್ಕೆ ಮಾತುಕತೆ ಆಗಿರುತ್ತದೆ. ಮಾತುಕತೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಆಗಿರುತ್ತದೆ. 17-07-2019 ರಂದು ಎಷ್ಟು ಗಂಟೆಗೆ ಮಾತುಕತೆ ಆಗಿತ್ತು

ಎಂದರೆ 7 ವರ್ಷ ಆಗಿದೆ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮಾತುಕತೆ ಬೆಳಿಗ್ಗೆ ಮಧ್ಯಾಹ್ನ ಮತ್ತು ಸಂಜೆ ಯಾವ ಸಮಯದಲ್ಲಿ ಆಗಿದೆ ಎಂದರೆ ಬೆಳಿಗ್ಗೆ ಆಗಿರಬಹುದು ಎಂದು ಉತ್ತರಿಸುತ್ತಾರೆ. ಮಾತುಕತೆಯ ಸಮಯದಲ್ಲಿ ವಿನೋದ, ಸುಭಾಷ, ಫುಲ್ ಸಿಂಗ್ ಮತ್ತು ನಾನು ಇದ್ದೆವು. 17-07-2019ಕ್ಕಿಂತ ಮುಂಚಿತವಾಗಿ ನಮ್ಮ ಮಧ್ಯೆ ಯಾವುದೇ ರೀತಿಯ ಮಾತುಕತೆ ಆಗಿಲ್ಲ. ಮಾತುಕತೆಯ ಸಂಬಂಧದ ಮುಂಚಿತವಾಗಿ ಹೊಲವನ್ನು ನೋಡಲು ಹೋಗಿಲ್ಲ.

5. ಖರೀದಿ ಕರಾರು ಪತ್ರಕ್ಕೆ ಸಹಿ ಮಾಡುವ ಮೊದಲೇ ಎಲ್ಲಾ ಬರವಣಿಗೆ ಆಗಿತ್ತು. ಖರೀದಿ ಕರಾರು ಪತ್ರವನ್ನು ವಿನೋದ ಎನ್ನುವವರು ಬೆರಳಚ್ಚು ಮಾಡಿಕೊಂಡು ಬಂದಿರುತ್ತಾರೆ. ಬೆರಳಚ್ಚು ಮಾಡಿಕೊಂಡು ಬಂದ ನಂತರ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ 4 ಜನರ ಸಹಿ ಪಡೆದು ಛಾಯಾಚಿತ್ರವನ್ನು ಪಡೆದುಕೊಂಡು ಹೊರಗಡೆ ಕಳುಹಿಸಿರುತ್ತಾರೆ ಎಂದರೆ ಸರಿ. ಖರೀದಿ ಕರಾರು ಪತ್ರವನ್ನು ವಿನೋದನು ವಾದಿಗೆ ಕೊಟ್ಟಿರುತ್ತಾನೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸಬ್ ರಿಜಿಸ್ಟ್ರಾರ್ ಆಫಿಸರ್ ಖರೀದಿ ಕರಾರು ಪತ್ರವನ್ನು ಓದಿ ಹೇಳಿಲ್ಲ ಆದರೆ ಸಬ್ ರಿಜಿಸ್ಟ್ರಾರ್ ಕೈ ಕೆಳಗೆ ಇರುವವರು ಓದಿ ಹೇಳಿರುತ್ತಾರೆ. ಸಬ್ ರಿಜಿಸ್ಟ್ರಾರ್ ಕೈ ಕೆಳಗೆ ಇರುವವರು ದ್ವಿತೀಯ ದರ್ಜೆಯ ಗುಮಾಸ್ತರು ಆಗಿದ್ದರು ಎಂದು ಉತ್ತರಿಸುತ್ತಾರೆ.

6. ಪ್ರತಿವಾದಿ ಅನಕ್ಷರಸ್ಥರು ಎಂದರೆ ಸರಿ. ವ್ಯವಹಾರ ಆಗುವ ಪೂರ್ವದಲ್ಲಿ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳನ್ನು ಕರೆಯಿಸಿ ನೀವಾಗಲೀ ವಾದಿಯಾಗಲೀ ಕರೆಯಿಸಿ ಅವರ ಒಪ್ಪಿಗೆ ವ್ಯವಹಾರದ ಬಗ್ಗೆ ತಿಳಿಸಲು ಪ್ರಯತ್ನ ಮಾಡಿದ್ದೀರಾ ಎಂದರೆ ಪ್ರತಿವಾದಿಗೆ ಅವರ ಹೆಂಡತಿ ಮತ್ತು ಮಕ್ಕಳನ್ನು ಕರೆಸಲು ಹೇಳಿದಾಗ ನೊಂದಣಿ ಮಾಡುವ ಸಮಯದಲ್ಲಿ ಕರೆಸುತ್ತೇವೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ದಿನಾಂಕ 17-07-2019 ರಂದು

ಸಂಬಂಧಪಟ್ಟಂತೆ ಅದರ ಮುಂಚೆಯಾಗಲೀ ನಂತರವರಾಗಲೀ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದಿಲ್ಲ ಎಂದರೆ ಬಂದು ಕೇಳಿಕೊಂಡು ಹೋಗಿರುತ್ತೇವೆ ಎಂದು ಉತ್ತರಿಸುತ್ತಾರೆ. 15 ದಿನಗಳ ಮುಂಚಿತವಾಗಿ ಕೇಳಿಕೊಂಡು ಹೋಗಿರುತ್ತೇವೆ. 15 ದಿನಗಳ ಮುಂಚೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಏನು ಕೇಳಿಕೊಂಡು ಹೋಗಿದ್ದೀರಿ ಎಂದರೆ ನೊಂದಣಿ ನಿಯಮಾವಳಿಗಳ ಬಗ್ಗೆ ಕೇಳಿರುತ್ತೇವೆ ಎಂದು ಉತ್ತರಿಸುತ್ತಾರೆ.

7. ವ್ಯವಹಾರದ ಮಾತುಕತೆ ಆದಾಗ ಎಕರೆಗೆ ಎಷ್ಟು ಎಂದು ಮಾತುಕತೆ ಆಯಿತು ಎಂದರೆ ಏನೂ ಮಾತುಕತೆ ಆಗಿಲ್ಲ ನೇರವಾಗಿ ನೊಂದಣಿ ಆಯಿತು ಎಂದು ಉತ್ತರಿಸುತ್ತಾರೆ. ನೋಂದಣಿಯಾದ ದಿನ ಪ್ರತಿವಾದಿಗೆ ವಿನೋದ ಎನ್ನುವವರು ಕರೆಯಿಸಿ ನೋಂದಣಿ ಪತ್ರಕ್ಕೆ ಸಹಿ ಮಾಡಿಸಿ ಕಳುಹಿಸಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ಮಾತುಕತೆ ಆಗಿಲ್ಲ ಎಂದು ಉತ್ತರಿಸುತ್ತಾರೆ. ನೀವು ಇದಕ್ಕಿಂತ ಮುಂಚಿತವಾಗಿ ಯಾವುದಾದರೂ ಕರಾರು ಪತ್ರಕ್ಕಾಗಲೀ ನೊಂದಣಿ ಪತ್ರಕ್ಕಾಗಲೀ ಸಹಿ ಮಾಡಿಲ್ಲ. ಸದರಿ ಹಣವನ್ನು ಚೆಕ್ ಮುಖಾಂತರ ಮತ್ತು RTGS ಮುಖಾಂತರ ಮಾರಾಟಗಾರರಿಗೆ ಕೊಡಬೇಕು ಎಂಬ ನಿಯಮ ಇದೆ ಎಂದರೆ ಸರಿ. ವ್ಯವಹಾರದ ಹಣವನ್ನು ಚೆಕ್ ಮೂಲಕ ಕೊಟ್ಟಿಲ್ಲ ನಗದು ರೂಪದಲ್ಲಿ ಕೊಟ್ಟಿರುತ್ತೇವೆ. ಆ ಸಮಯದಲ್ಲಿ ವಾದಿಯ ಹತ್ತಿರ ಚೆಕ್ಕುಗಳು ಇದ್ದವು. ಸದರಿ ನಗದು ಹಣ 500 ಮುಖಬೆಲೆಯ ಹೊಸ ನೋಟುಗಳು ಇದ್ದವು. ಸದರಿ ಹಣವನ್ನು ವಾದಿಯು ಯಾವ ರೀತಿ ತಂದಿದ್ದಾರೆ ಎಂದು ಗೊತ್ತಿಲ್ಲ. ಖರೀದಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಮಾತುಕತೆ ಆಗಿಲ್ಲ ನೀವು , ವಿನೋದನಾಯಕ ಮತ್ತು ಬಾಬು ಮತ್ತು ವಾದಿ ಸೇರಿ ಪ್ರತಿವಾದಿಗೆ ಗೊತ್ತಿಲ್ಲದೇ ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿದ್ದೀರಿ ಎಂದರೆ ಅವರ ಎದುರಿಗೇ ಆಗಿದೆ ಎಂದು ಉತ್ತರಿಸುತ್ತಾರೆ. ಇವತ್ತಿನವರೆಗೂ ನಿಮಗೆ , ಬಾಬು ಮತ್ತು ವಾದಿಯ ಮಧ್ಯೆ ಹಣಕಾಸಿನ ಬಗ್ಗೆ ತಕರಾರು ಇದೆ

ಎಂದರೆ ವಯಕ್ತಿಕ ತಕರಾರು ಇದೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಮಗೆ ಮತ್ತು ಅವರ ನಡುವೆ ಯಾವುದೇ ತಕರಾರು ಇಲ್ಲ ನಾವು ಸ್ನೇಹಿತರು ಎಂದು ಉತ್ತರಿಸುತ್ತಾರೆ. ನಿಮ್ಮ, ಬಾಬು ಮತ್ತು ವಾದಿಯ ಮಧ್ಯೆ ಹಣಕಾಸಿನ ಸಮಸ್ಯೆ ಇರುವ ಸಲುವಾಗಿ ಬಾಬು ಮತ್ತು ವಿನೋದ ನಾಯಕ ಕೂಡಿಕೊಂಡು ಪ್ರತಿವಾದಿಗೆ ಗೊತ್ತಿಲ್ಲದೇ ಬರೆಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬಾಬುವಿನ ಬ್ಲ್ಯಾಂಕ್ ಚೆಕ್ ನಿಮ್ಮ ಮತ್ತು ವಾದಿಯ ಹತ್ತಿರ ಇದೆ ಎಂದರೆ ವಾದಿಯ ಹತ್ತಿರ ಇರಬಹುದು ಎಂದು ಉತ್ತರಿಸುತ್ತಾರೆ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ